**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 293/2022**

| | | |
|---|---|---|
| ಸಾಕ್ಷಿಯ ಹೆಸರುಃ | ರಾಕೇಶ | ಫ್ರಾಸಾಃಃ 2 |
| ತಂದೆ ಹೆಸರುಃ | ನಾಗೇಂದ್ರ .ಕೆ.ಬಿ | ಚಾಸಾಃಃ 2 |
| ವಯಸ್ಸುಃ | 25 ವರ್ಷ | ಪ್ರಮಾಣೀಕರಿಸಿದ<br>ದಿಃ 03/10/2023 |
| ಉದ್ಯೋಗಃ | ನಿರುದ್ಯೋಗಿ | |
| ವಾಸ ಸ್ಥಳಃ | ಅಂಬಲಾರೆ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತರ ಪರಿಚಯವಿದೆ. ನನಗೆ ಫ್ರಾಸಾ-1, ಚಾಸಾ-3 ರಿಂದ 7 ರವರ ಪರಿಚಯ ಇದೆ.

ದಿಃ 16/01/2022 ರಂದು ಬೆಳಿಗ್ಗೆ 9.30 ಗಂಟೆ ಸುಮಾರಿಗೆ ನಾನು ಮನೆಗೆ ಹೋಗುತ್ತಿರುವಾಗ ಪುನೀತ್ ಹಾಗೂ ಅನಿಲ್ ಕುಮಾರ್ ಇಬ್ಬರೂ ನನ್ನ ಮುಂದೆ ಬಂದು ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ನಾನು ಯಾಕೇ ಬೈಯುತ್ತೀರಿ ಎಂದು ಕೇಳಿದಾಗ 1 ನೇ ಆರೋಪಿತ ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ನನ್ನ ಎಡ ಭುಜಕ್ಕೆ ಹಾಗೂ ಬೆನ್ನಿಗೆ ಹೊಡೆದರು. ಆಗ ನಾನು ತಕ್ಷಣ ಕೆಳಗೆ ಬಿದ್ದೆ. ನಂತರ 3 ನೇ ಆರೋಪಿತ ಅದೇನು ಆಗುತ್ತೋ ಆಗಲಿ ಹೊಡೆಯಿರಿ ಎಂದು ಕುಮ್ಮಕ್ಕು ಕೊಟ್ಟರು. 2 ನೇ ಆರೋಪಿತ ಅದೇ ದೊಣ್ಣೆಯಿಂದ ನನ್ನ ಮುಂಗೈ ಹಾಗೂ ಬಲಕಾಲಿಗೆ ಹೊಡೆದರು. ನಂತರ ನನ್ನ ತಂದೆ ತಾಯಿ ಬಂದು ಜಗಳ ಬಿಡಿಸಿದರು. ನಂತರ ನಾನು ಸರ್ಕಾರಿ ಆಸ್ಪತ್ರೆಗೆ ನನ್ನ ಸಂಬಂಧಿಕರೊಂದಿಗೆ ಹೋಗಿ ದಾಖಲಾಗಿರುತ್ತೇನೆ.

ದಿಃ 21/01/2022 ರಂದು ಸಂಜೆ ಸುಮಾರು 5.30 ಗಂಟೆಗೆ ನಾನು ಠಾಣೆಗೆ ಹೋಗಿ ದೂರನ್ನು ದಾಖಲಿಸಿದೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಎ)** ಎಂದು ಗುರುತಿಸಲಾಯಿತು. ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆ ಈ ದಿನ ನ್ಯಾಯಾಲಯದ ಮುಂದೆ ಇದೆ, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ಘಟನಾ ಕಾಲಕ್ಕೆ 1 ಮತ್ತು 2 ನೇ ಆರೋಪಿತರು ಈ ದಿವಸ ಬಚಾವ್ ಆಗಿದ್ದೀಯಾ ಮುಂದೊಂದು ದಿವಸ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

ವೈದ್ಯರಿಗೆ ಗಲಾಟೆ ಬಗ್ಗೆ ತಿಳಿಸಿದ್ದೇನೆ. ಆ ದಿನ ನನಗೆ ಹೇಳಿಕೆ ಕೊಡುವ ಸಾಮರ್ಥ್ಯ ಇತ್ತು. ನಾನು ಚಿಕಿತ್ಸೆ ಪಡೆಯುವ ಸಮಯಕ್ಕೆ ಪೊಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದಿಲ್ಲ. ನಾನು ವೈದ್ಯರಿಗೆ ಯಾವ ಆರೋಪಿತ ಯಾವ ಆಯುಧದಿಂದ ಹಲ್ಲೆ ಮಾಡಿದರು ಎಂದು ತಿಳಿಸಿಲ್ಲ. ಗಲಾಟೆ ಸುಮಾರು ಅರ್ಧ ಗಂಟೆ ನಡೆಯಿತು. ನಾನು ಪಿರಿಯಾಪಟ್ಟಣಕ್ಕೆ ಯಾವ ಮಾರ್ಗದಲ್ಲಿ ತಲುಪಿದೆ ಎಂದು ಗೊತ್ತಿಲ್ಲ, ಏಕೆಂದರೆ ನಾನು ಮಲಗಿಬಿಟ್ಟಿದ್ದೆ.

ನಾನು ಡಿಗ್ರಿ ಓದಿದ್ದೇನೆ. ನಾನು ನನ್ನ ತಂದೆಗೆ ಈ ಪ್ರಕರಣದ ದೂರನ್ನು ಕೊಡಲು ತಿಳಿಸಿದ್ದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮತ್ತು ನನ್ನ ತಂದೆ ಸೇರಿ ಒಂದೇ ದೂರನ್ನು

ದಾಖಲಿಸಿರುತ್ತೇವೆ. ದಿಃ21/01/2022 ರಂದು ನಾನು, ನನ್ನ ತಂದೆ ಹಾಗೂ ನನ್ನ ಸಂಬಂಧಿಕರು ಸೇರಿ ದೂರನ್ನು ದಾಖಲಿಸಿರುತ್ತೇವೆ. ದಿಃ21/01/2022 ರಂದು ದಾಖಲಿಸಿದ ದೂರನ್ನು ಬಿಟ್ಟು ಬೇರೆ ದೂರನ್ನು ದಾಖಲಿಸಿಲ್ಲ. ನಾನು ದೂರನ್ನು ಕೊಡುವ ಮುಂಚಿತವಾಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ಹೋಗಿರಲಿಲ್ಲ.

ಮು.ಮಾ.1ರ ಬಗ್ಗೆ ನಾನು ನನ್ನ ದೂರಿನಲ್ಲಿ ನಮೂದಿಸಿದ್ದೇನೆ. ಮು.ಮಾ.1 ಸುಮಾರು ಮೂರುವರೆ-ನಾಲ್ಕು ಅಡಿ ಉದ್ದ ಇದೆ. ಪೊಲೀಸರು ಮು.ಮಾ.1 ನ್ನು ನನಗೆ ತೋರಿಸಿ ಅದರಿಂದಲೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ಪ್ರಶ್ನಿಸಿರುತ್ತಾರೆ. ಮು.ಮಾ.1 ಎಲ್ಲಾ ಕಡೆಯೂ ಸಿಗುತ್ತದೆ ಎಂದರೆ ಸರಿ. ಮು.ಮಾ.1 ರಿಂದ ಹಲ್ಲೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ನಾನೇ ಪೊಲೀಸರಿಗೆ ಕೊಟ್ಟಿರುತ್ತೇನೆ. ನನ್ನ ಸಮಕ್ಷಮ ಅದರ ಅಳತೆ ಮಾಡಿಲ್ಲ. ಮು.ಮಾ.1ರ ಮೇಲೆ ಬೇರೆಯವರ ಸಹಿ ಪಡೆದಿದ್ದರೋ ಇಲ್ಲವೋ ಗೊತ್ತಿಲ್ಲ. ನಾನು ನಡೆದುಕೊಂಡು ನಮ್ಮ ಮನೆಗೆ ಹೋಗುತ್ತಿರುವಾಗ ನನ್ನ ಮೇಲೆ ಹಲ್ಲೆಯಾಯಿತು. ಹಲ್ಲೆಯಾದ ಜಾಗಕ್ಕೂ ಮತ್ತು ನಮ್ಮ ಮನೆಗೂ ಸುಮಾರು 50 ಅಡಿ ಅಂತರ ಇದೆ.

ನಾನು 1 ನೇ ಆರೋಪಿತನಿಂದ 25 ಸಾವಿರ ಹಣವನ್ನು ಪಡೆದುಕೊಂಡು ವಾಪಸ್ಸು ನೀಡಿರುತ್ತೇನೆ. ಅವರು ಹಣವನ್ನು ವಾಪಸ್ಸು ಕೊಡಲು ಕೇಳಿದ್ದರಿಂದ ಆರೋಪಿತರ ಮೇಲೆ ದ್ವೇಷ ಇದೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿತರು ಯಾವುದೇ ಕುಮ್ಮಕ್ಕು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಂಬಲಾರೆ ಗ್ರಾಮದಿಂದ ಪಿರಿಯಾಪಟ್ಟಣಕ್ಕೆ ಸುಮಾರು 25-30 ಕಿ.ಮೀ.ಅಂತರ ಇದೆ. ಕನಿಷ್ಟ ಒಂದು ಗಂಟೆ ಅವಧಿ ಬೇಕಾತ್ತದೆ ಎಂದರೆ ಸರಿ. ಪಿರಿಯಾಪಟ್ಟಣಕ್ಕೆ ಬರುವುದಕ್ಕಿಂತ ಮುಂಚೆ ನಮ್ಮ ಗ್ರಾಮದಿಂದ ಬೆಟ್ಟದಪುರ ಹತ್ತಿರದ ಗ್ರಾಮ ಎಂದರೆ ಸರಿ. ಅಂಬಲಾರೆ ಗ್ರಾಮ ಮತ್ತು ಬೆಟ್ಟದಪುರಕ್ಕೆ ಸುಮಾರು 10 ಕಿ.ಮೀ ಅಂತರ ಇದೆ. ಅಂಬಲಾರೆ ಗ್ರಾಮಕ್ಕೂ ಮತ್ತು ಹಾರನಹಳ್ಳಿ ಗ್ರಾಮಕ್ಕೂ 2 ಕಿ.ಮೀ ಅಂತರ ಇದೆ. ಹಾರನಹಳ್ಳಿ

ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧ ಮಾಡಿಲ್ಲದಿದ್ದರೂ ಸಹ ಮು.ಮಾ.1 ನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ನ್ನು ಇದೇ ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮಾಡಿದ ಹಲ್ಲೆಯಿಂದ ನನಗೆ ರಕ್ತಗಾಯವಾಗಿ ನನ್ನ ಬಟ್ಟೆಗಳು ರಕ್ತದ ಕಲೆಯಾಗಿತ್ತು. ವೈಧ್ಯರಿಗೆ ನಾನು ರಕ್ತಗಾಯವಾಗಿರುತ್ತದೆ ಎಂದು ತಿಳಿಸಿರುತ್ತೇನೆ. ಪೊಲೀಸರಿಗೆ ರಕ್ತದ ಬಟ್ಟೆಗಳನ್ನು ಕೊಟ್ಟಿದ್ದೇನೆ. ಪೊಲೀಸರಿಗೆ ಬಟ್ಟೆಗಳನ್ನು ಕೊಟ್ಟ ಬಗ್ಗೆ ನೆನಪಿಲ್ಲ. ರಕ್ತಗಾಯವಾದ ಬಗ್ಗೆ ನನ್ನ ದೂರಿನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ, ಆದರೆ ಯಾವ ದಿನಾಂಕದಂದು ನೀಡಿದ್ದೇನೆ ಎಂದು ನೆನಪಿಲ್ಲ. ನನಗೆ ರಕ್ತಗಾಯವಾಗಿಲ್ಲ, ರಕ್ತದ ಬಟ್ಟೆಗಳನ್ನು ಪೊಲೀಸರಿಗೆ ಕೊಟ್ಟಿಲ್ಲ, ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್ಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**